ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ಐಸಿಎಆರ್–ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192–263462
ಫ್ಯಾಕ್ಸ್: 08192 – 260969

ತ್ರೈಮಾಸಿಕ ಪತ್ರಿಕೆ
(Quarterly News Letter)
ಜುಲೈ – ಸೆಪ್ಟಂಬರ್ 2014

ಮಿಂಚಂಚೆ: dvgtkvk@yahoo.com
Website: www.taralabalukvk.com
ಸಂಪುಟ–7 ಸಂಚಿಕೆ–4

## ಸಿಂಚನಕ್ಕೆ ಮುನ್ನ ........

ಆತ್ಮೀಯ ಬಂಧುಗಳೇ,

ಮಳೆಗಾಲ ಚೆನ್ನಾಗಿದೆ. ಬೆಳೆಗಳು ನಮ್ಮ ಜಿಲ್ಲೆಯಲ್ಲಿ ಫಲಭರಿತವಾಗಿ ನಿಂತಿವೆ. ಹೊಸ ಗಾಳಿ, ಹೊಸ ಅಲೆ, ಹೊಸ ಆಸೆ, ಹೊಸ ಕನಸು, ಹೊಸ ಸಂಕಲ್ಪ, ಹೊಸ ಗುರಿ, ಹೊಸ ಜವಾಬ್ದಾರಿ ಹೀಗೆ ಹೊಸತನಗಳ ಮಹಾಪೂರವೇ ಜಿಲ್ಲೆ (ದೇಶ) ಯನ್ನು ವ್ಯಾಪಿಸಿದೆ. ಕೃಷಿ ವಿಜ್ಞಾನ ಕೇಂದ್ರಕ್ಕೆ ಬಂದು–ಹೋಗುವ ರೈತರ ಸಂಖ್ಯೆಯೂ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಸಾವಯವ ಮೈ–ಮನ, ಆಹಾರ, ಚಿಂತನೆಗಳು ಹೆಚ್ಚಾಗಲಿ.

ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ ಸಂದರ್ಭದಲ್ಲಿ ನೆಚ್ಚಿನ ಮೀನು ಕೃಷಿಕ ಮುಜಾಮಿಲ್ ನಿಗೆ ಸನ್ಮಾನ ಮಾಡಿದ್ದು, ಜಗಳೂರು ತಾಲ್ಲೂಕಿನ ಉದ್ದಘಟ್ಟದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಪ್ರೌಢಶಾಲೆಯಲ್ಲಿ 'ಅಂತರ ರಾಷ್ಟ್ರೀಯ ಜೈವಿಕ' ದಿನವನ್ನು ಆಚರಿಸಿದ್ದು, ವಿಶ್ವ ಕೈತೋಟ ದಿನಾಚರಣೆ ಸಲುವಾಗಿ ಮಹಿಳೆಯರಿಗೆ ವಿಶೇಷ ತರಬೇತಿ ಹಮ್ಮಿಕೊಂಡಿದ್ದು,ಸಂಭ್ರಮದ ನೆನಪುಗಳು. ಹಿರಿಯ ಶ್ರೀ ತರಳಬಾಳು ಜಗದ್ಗುರುಗಳ ಶ್ರದ್ಧಾಂಜಲಿ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಕೃಷಿ ವಸ್ತು ಪ್ರದರ್ಶನ ಎಲ್ಲರ ಮನ ಗೆದ್ದಿದೆ. ಹತ್ತಾರು ಸಾವಿರು ರೈತರು ಇದರ ಪ್ರಯೋಜನ ಪಡೆದದ್ದು ನಮ್ಮ ಪರಿಶ್ರಮಕ್ಕೆ ಸಾರ್ಥಕತೆ ತಂದಿತ್ತು.

ಮುಂಗಾರು ಋತುವಿನ ಕೃಷಿ ಪ್ರಾತ್ಯಕ್ಷಿಕೆಗಳನ್ನು ಅನುಷ್ಠಾನಗೊಳಿಸುವ ಕಾರ್ಯವನ್ನು ತೃಪ್ತಿಕರವಾಗಿ ನಮ್ಮ ತಂಡ ಮುಗಿಸಿದೆ. ಸಮಸ್ಯೆಗಳಿರುವ ರೈತರ ತಾಕುಗಳಿಗೆ ನಮ್ಮ ತಜ್ಞರುಗಳು ಭೇಟಿ ನೀಡಿ, ಪರಿಹಾರೋಪಾಯಗಳನ್ನು ಸೂಚಿಸುವ ಚಟುವಟಿಕೆಗಳು ನಿರಂತರವಾಗಿ ಸಾಗಿವೆ. ಕ್ಷೇತ್ರೋತ್ಸವಗಳು, ವಿವಿಧ ಬಗೆಯ ತರಬೇತಿಗಳು, ಉಪನ್ಯಾಸಗಳು, ಕಿಸಾನ್ ಫೋನ್ ಸಂದೇಶಗಳು, ಕಾರ್ಯಾಗಾರಗಳು, ಹೀಗೆ ಹಲವಾರು ವಿಸ್ತರಣಾ ಚಟುವಟಿಕೆಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ತಂಡವು ತೊಡಗಿಸಿಕೊಂಡಿತ್ತು. ಈ ಬಾರಿಯ ಸ್ವಾಂತಂತ್ರ್ಯೋತ್ಸವ ಎಂದಿಗಿಂತಲೂ ಅದ್ದೂರಿಯಾಗಿ ಸಂಭ್ರಮ ಸಡಗರದಿಂದ ಆಚರಿಸಲಾಯ್ತು. ಮುಂದಿನ 3 ತಿಂಗಳುಗಳ ಚಟುವಟಿಕೆಗಳಿಗೆ ಅಡಿಪಾಯ ಯೋಜನೆಗಳ ತಯಾರಿಯಾಗಿದೆ.

ನಮ್ಮ ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರವು ಕೃಷಿಕ ಬಂಧುಗಳಿಗೆ ಇನ್ನು ಹೆಚ್ಚಿನ ಉಪಯುಕ್ತತೆಗೆ ಪಾತ್ರವಾಗಲೆಂದು ಹೊಸ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡಿದ್ದೇವೆ. ಬೆಂಡೆ (ಅರ್ಕಾ ಅನಾಮಿಕ) ಸೋರೆಕಾಯಿ (ಅರ್ಕಾ ಭಹಾರ್) ಬೀಜೋತ್ಪಾದನೆ ಕಾರ್ಯ ಮುಗಿದಿದ್ದು, ಕೆ.ಎಸ್.ಎಸ್.ಸಿ. ಗೆ ಬೀಜಗಳನ್ನು ನೀಡಲಾಗಿದೆ.

ವಂದನೆಗಳು,

ಪ್ರೀತಿಯಿಂದ
ಡಾ. ದೇವರಾಜ ಟಿ.ಎನ್.

## ಕೃಷಿ ವಸ್ತು ಪ್ರದರ್ಶನಗಳು



ದಿನಾಂಕ 14–08–2014 ರಿಂದ
ಉದ್ದಘಟ್ಟ ಗ್ರಾಮ, ಜಗಳೂರು ತಾ.



ದಿನಾಂಕ 20–9–2014 ರಿಂದ 24–9–2014 ರವರೆಗೆ
ಸಿರಿಗೆರೆ, ಚಿತ್ರದುರ್ಗ ತಾ.
ಪರಮಪೂಜ್ಯರು ಮಳಿಗೆಗೆ ಭೇಟಿ ನೀಡಿದ ಸಂದರ್ಭ

## ವಿಶೇಷ ದಿನಾಚರಣೆಗಳು



ದಿ. 10–07–2014 ರಂದು ಮೀನುಗಾರಿಕೆ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ 'ರಾಷ್ಟ್ರೀಯ ಮೀನು ಕೃಷಿಕರ ದಿನ' ಆಚರಿಸಲಾಯಿತು.



ದಿ. 14–08–2014 ರಂದು ದಾವಣಗೆರೆ ಜಿಲ್ಲಾಡಳಿತದ ಸಹಯೋಗದಲ್ಲಿ ಜಗಳೂರು ತಾ. ಉದ್ದಘಟ್ಟಗ್ರಾಮದಲ್ಲಿ 'ವಿಶ್ವ ಜೈವಿಕ ಇಂಧನ ದಿನ' ಆಚರಿಸಲಾಯಿತು.



ದಿ. 15–08–2014 ರಂದು ಕೇಂದ್ರದಲ್ಲಿ 67 ನೇ 'ಸ್ವಾತಂತ್ರ್ಯ ದಿನಾಚರಣೆ' ಆಚರಿಸಲಾಯಿತು 'ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ' ಗೌರವ ಸಲಹೆಗಾರರಾದ ಶ್ರೀ ಹೆಚ್.ಡಿ. ಮಹೇಶ್ವರಪ್ಪನವರು ಧ್ವಜಾರೋಹಣ ನೇರವೇರಿಸಿದರು.



ದಿನಾಂಕ 30–09–2014 ರಂದು ಬಾಪೂಜಿ ಪಾಲಿಟೆಕ್ನಿಕ್, ದಾವಣಗೆರೆ ಇವರ ಸಹಯೋಗದಲ್ಲಿ 'ವಿಶ್ವ ಕೈತೋಟ ದಿನ' ಆಚರಿಸಲಾಯಿತು.



ದಿನಾಂಕ 26–07–2014 ರಂದು **'ICAR Foundation Day'** ಯನ್ನು ನಿಕ್ರಾ ಯೋಜನೆ ಅನುಷ್ಠಾನಗೊಳ್ಳುತ್ತಿರುವ ದಾವಣಗೆರೆ ತಾ. ಸಿದ್ದನೂರು ಗ್ರಾಮದಲ್ಲಿ ಆಚರಿಸಲಾಯಿತು.



ದಿನಾಂಕ 14–07–2014 ರಂದು 'Protection of Plant Varieties and Farmers Right Act' (PPV&FRA) ಯೋಜನೆಯಡಿ ತಜ್ಞರ ತಂಡ ಕುಂಬಳೂರಿನ ಶ್ರೀ ಆಂಜನೇಯ ಎ.ಎನ್. ರವರ ಸಂರಕ್ಷಣೆ ಮಾಡಿರುವ 'ದೊಡ್ಡ ಭತ್ತ' ತಳಿಯ ಪರಿಶೀಲನೆಗಾಗಿ ಭೇಟಿ ನೀಡಿತ್ತು.

## ಸಿದ್ದನೂರಿನಲ್ಲಿ ನಿಕ್ರಾ (NICRA) ಯೋಜನೆಯ ಚಟುವಟಿಕೆಗಳು



ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ BRG-2 ತೊಗರಿ ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ.



ಪಶು ಚಿಕಿತ್ಸಾ ಶಿಬಿರ

## ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕಿಕಾ ಘಟಕದ ಚುಟುವಟಿಕೆಗಳು



ಜೈವಿಕ ಇಂಧನದ ಬಗ್ಗೆ ಅರಿವು ಕಾರ್ಯಕ್ರಮ

ಶಾಲಾ ಮಕ್ಕಳಿಗೆ ಜೈವಿಕ ಇಂಧನ ಉತ್ಪಾದನೆ ಬಗ್ಗೆ ಮಾಹಿತಿ



# ಹಮ್ಮಿಕೊಂಡ ವಿಶೇಷ ತರಬೇತಿಗಳು




'ತೆಂಗಿನ ಮರ ಹತ್ತುವ ಮತ್ತು ಸಸ್ಯ ಸಂರಕ್ಷಣೆ'
ಹಳೇ ವಿದ್ಯಾರ್ಥಿಗಳ ಸಮ್ಮೇಳನ



'ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ'
ತೋಟಗಾರಿಕಾ ಇಲಾಖೆ ಸಿಬ್ಬಂದಿಗೆ ತರಬೇತಿ.



ಕೃಷಿ ಇಲಾಖೆಯ 'ರೈತ ಅನುವುಗಾರರಿಗೆ'
ತರಬೇತಿ.



'ಬಾಪೂಜಿ ಪಾಲಿಟೆಕ್ನಿಕ್' ದಾವಣಗೆರೆ
ಇವರ ಸಹಯೋಗದಲ್ಲಿ
'ಜೇನು ಸಾಕಣೆ'
ಬಗ್ಗೆ ತರಬೇತಿ.



ಎನ್.ಐ.ಎ.ಎನ್.ಪಿ ಮತ್ತು ಐ.ವಿ.ಆರ್.ಐ.
ಬೆಂಗಳೂರು ಇವರ ಸಹಯೋಗದಲ್ಲಿ ಪ್ರತಿಕೂಲ
ವಾತಾವರಣದಲ್ಲಿ ಜಾನುವಾರಗಳ ಆಹಾರ ಮತ್ತು
ಆರೋಗ್ಯ ನಿರ್ವಹಣಾ ಕ್ರಮಗಳ ಬಗ್ಗೆ ತರಬೇತಿ.



ಕೃಷಿ ತಂತ್ರಜ್ಞರ ಸಂಸ್ಥೆ, ದಾವಣಗೆರೆ
ಇವರ ಸಹಯೋಗದಲ್ಲಿ
'ಹೈನುಗಾರಿಕೆಯಲ್ಲಿ ಖನಿಜ ಮಿಶ್ರಣದ ಮಹತ್ವ'ದ
ಬಗ್ಗೆ ತರಬೇತಿ.

# ರೈತರಿಗೆ ಮುನ್ಸೂಚನೆಗಳು

**ಬೇಸಾಯ ಶಾಸ್ತ್ರ :**

- ಮೆಕ್ಕೆಜೋಳವನ್ನು ಕಟಾವು ಮಾಡಿದ ನಂತರ, ಬೆಳೆ ಉಳಿಕೆಗಳನ್ನು ಭೂಮಿಯಲ್ಲಿ ಸೇರಿಸುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು.
- ರಾಗಿ ಬೆಳೆಗೆ ನೀರಿನಲ್ಲಿ ಕರುಗುವ ಗೊಬ್ಬರವನ್ನು (19:19:19) 5 ಗ್ರಾಂ./1 ಲೀ. ನಂತೆ ಸಿಂಪರಣೆ ಮಾಡಬೇಕು.
- ಭತ್ತ ಕಟಾವಾದ ನಂತರ ಹಸಿರೆಲೆ ಗೊಬ್ಬರಗಳನ್ನು (ಸೆಣಬು/ಡಯಾಂಚ) ಬಿತ್ತನೆ ಮಾಡುವುದರಿಂದ (10–12 ಕೆ.ಜಿ./ ಎಕರೆ) ಮಣ್ಣಿನ ಫಲವತ್ತತೆಯನ್ನು ಕಾಪಾಡಬಹುದು.

**ಕಬ್ಬು :**

- ರಸಾಯನಿಕ ಗೊಬ್ಬರ: 250:75:190 (ಎನ್:ಪಿ:ಕೆ. ಕೆಜಿ/ಹೆ.) ನಾಟಿ ಮಾಡುವಾಗ ಶೇ. 10% ಸಾರಜನಕ ಪೂರ್ತಿ ರಂಜಕ ಹಾಗೂ ಪೊಟ್ಯಾಷ್ ಒದಗಿಸಬೇಕು. ಉಳಿದ ಸಾರಜನಕವನ್ನು ನಾಟಿ ಮಾಡಿದ 6 ನೇ ವಾರಕ್ಕೆ (20%), 10 ನೇ ವಾರಕ್ಕೆ (30%), 14 ನೇ ವಾರಕ್ಕೆ (40%) ಒದಗಿಸಬೇಕು.
- ಕಬ್ಬು ಕಟಾವಾದ ನಂತರ ರವದಿಯನ್ನು ಪ್ರತಿ ಸಾಲಿನಲ್ಲಿ ಅಥವಾ ಸಾಲು ಬಿಟ್ಟು ಸಾಲಿನಲ್ಲಿ ಸಮನಾಗಿ ಹರಡಿ 25–30ಕೆ.ಜಿ. ಯೂರಿಯಾ ಮತ್ತು 20ಕೆ.ಜಿ. ಡಿಎಪಿ ಯನ್ನು ರವದಿ ಮೇಲೆ ಹಾಕಬೇಕು ನಂತರ 4–5ಕೆ.ಜಿ. ರವದಿ ಕಳಿಸುವ ಸೂಕ್ಷ್ಮಾಣು ಜೀವಿ ಟ್ರೈಕೋಡರ್ಮಾವನ್ನು ಸಗಣಿ ರಾಡಿಯಲ್ಲಿ ಕಲಸಿ ಮೇಲೆ ಚೆಲ್ಲುವುದರಿಂದ ರವದಿ ಬೇಗನೆ ಕಳಿಯುತ್ತದೆ.

**ಮಣ್ಣು ವಿಜ್ಞಾನ :**

- ಭತ್ತದ ನಾಟಿಯ ನಂತರ ಮೊದಲನೇ ಗೊಬ್ಬರವಾಗಿ ಪ್ರತಿ ಎಕರೆಗೆ 50ಕೆ.ಜಿ. ಡಿಎಪಿ+25ಕೆ.ಜಿ. ಯೂರಿಯಾ + 2ಕೆ.ಜಿ. ಎಂಓಪಿ. ಅಥವಾ 100 ಕೆ.ಜಿ. 10:26:26 + 25ಕೆ.ಜಿ. ಯೂರಿಯಾ ಅಥವಾ 100ಕೆ.ಜಿ. 20:20:0:13 + 25ಕೆ.ಜಿ. ಎಂಓಪಿ. ಯನ್ನು ಬಳಸಬೇಕು. ನಾಟಿ ಮಾಡಿದ 30–35 ದಿನಗಳಲ್ಲಿ ಎಕರೆಗೆ 25ಕೆ.ಜಿ. ಯೂರಿಯಾ ಮತ್ತು 45–50ನೇ ದಿನದಲ್ಲಿ 20ಕೆ.ಜಿ. ಯೂರಿಯಾ ಮತ್ತು 25ಕೆ.ಜಿ. ಎಂಓಪಿ ಬಳಸಬಹುದು.
- ಭತ್ತದಲ್ಲಿ ಕಾಳು ಜೊಳ್ಳಾಗುವುದನ್ನು ತಡೆಗಟ್ಟಲು ಶೇ. 0.1 (1ಗ್ರಾಂ/ಲೀ.) ರ ಬೋರಾನ್ ದ್ರಾವಣವನ್ನು ಸಿಂಪಡಿಸಿರಿ.
- ಗೊಬ್ಬರಗಳನ್ನು ಉಪಯೋಗಿಸುವ ಮುಂಚೆ ಮಣ್ಣು ಪರೀಕ್ಷೆ ಮಾಡಿಸಿ.

**ಸಸ್ಯ ಸಂರಕ್ಷಣೆ :**

**ಭತ್ತ :**

- ಬೆಂಕಿ ರೋಗ: ಎಲೆಗಳ ಮೇಲೆ ಚಿಕ್ಕ ಕಂದು ಚುಕ್ಕೆಗಳು ಕಂಡು ನಂತರ ಚುಕ್ಕೆಗಳು ಒಂದಕ್ಕೊಂದು ಸೇರಿ ಎಲೆಗಳು ಒಣಗುತ್ತವೆ. ಎಲೆ, ಗಿಣ್ಣು, ತೆನೆಯ ದೇಟು, ತೆನೆ ಮತ್ತು ಕಾಳುಗಳ ಮೇಲೆ ರೋಗದ ಚಿಹ್ನೆಗಳು ಕಾಣಿಸುತ್ತವೆ. ಕೆಲವೊಮ್ಮೆ ಸಸ್ಯ ಒಣಗಿ ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ. ತೆನೆಯ ಬುಡದ ಗಣ್ಣಿಗೆ ರೋಗ ತಗುಲಿ ಕುತ್ತಿಗೆ ಭಾಗ ಕಪ್ಪಾಗಿ ಕಾಳು ಜೊಳ್ಳಾಗಿ ಕುತ್ತಿಗೆ ಭಾಗ ಕೊಳೆಯುತ್ತದೆ.

  ಹತೋಟಿ: ರೋಗದ ಬಾಧೆ ಕಂಡಾಗ ಟ್ರೈಸೈಕ್ಲಜೋಲ್ 0.6 ಗ್ರಾಂ. ಅಥವಾ ಐಸೊಪ್ರೊಥಿಯೊಲೇನ್ (ಫ್ಯುಜಿವನ್) 1.5 ಮಿಲೀ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

  ಕಂದುಜಿಗಿಹುಳು: ಪ್ರೌಢ ಮತ್ತು ಅಪ್ಸರೆ ಕೀಟಗಳು ಪೈರಿನ ಬುಡಭಾಗದಲ್ಲಿ ಕಾಂಡದ ಮೇಲೆ ಆವರಿಸಿ ರಸ ಹೀರುತ್ತವೆ. ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಸುಟ್ಟಂತೆ ಮತ್ತು ಕುಸಿದಂತೆ ಕಾಣುತ್ತದೆ. ಭತ್ತದಲ್ಲಿ ಕಾಳು ತುಂಬದೆ ಜೊಳ್ಳಾಗಿ ಇಳುವರಿ ಕುಂಠಿತವಾಗುತ್ತದೆ. ಬಾಧೆಗೊಳಗಾದ ಕಾಂಡದ ಮೇಲೆ ಜೋನಿಯಂತಿರುವ ಜಿಗುಟಾದ ವಸ್ತು ಕಂಡು ಬರುತ್ತದೆ.

**ಹತೋಟಿ:**

- ಜಿಗಿಹುಳುವಿನ ಸಂಖ್ಯೆ ಆರ್ಥಿಕ ನಷ್ಟ ಮಿತಿ ಮೀರಿದಾಗ (5–10 ಜಿಗಿಹುಳು/ತೆಂಡೆಗೆ) ನೀರನ್ನು ಬಸಿದು 200 ಮಿಲೀ. ಡೈಕ್ಲೋರ್‌ವಾಸನ್ನು 5 ಕಿ.ಗ್ರಾಂ. ಮರಳಿನಲ್ಲಿ ಮಿಶ್ರಮಾಡಿ ಎಕರೆಗೆ ಎರಚಬೇಕು. ನಂತರ ಅಸಿಫೇಟ್ 1 ಗ್ರಾಂ. ಮತ್ತು ಕ್ಲೋರ್‌ಪೈರಿಫಾಸ್ 2.0 ಮಿಲೀ. ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು. ಬಾಧೆ ಹೆಚ್ಚಾದಾಗ ಬುಪ್ರಫೆಜಿನ್ 1.5 ಮಿಲೀ. ಅಥವಾ ಥಯೋಮಿಥಾಕ್ಸಾಂ 0.5 ಗ್ರಾಂ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

**ತೋಟಗಾರಿಕೆ :**

- ಅಡಿಕೆ ತೋಟಗಳಲ್ಲಿ ಕೊಯ್ಲು ಮುಗಿಯುವ ಹಂತದಲ್ಲಿದ್ದು, ಹಿಂಗಾರು ರಸಗೊಬ್ಬರವನ್ನು ನೀಡಲು ಸೂಕ್ತ ಸಮಯವಾಗಿದ್ದು, 10 ವರ್ಷ ಮೇಲ್ಪಟ್ಟ ಗಿಡಗಳಿಗೆ 10:26:26 100 ಗ್ರಾಂ. ಡಿ.ಎನ್.ಪಿ 350 ಗ್ರಾಂ. ಪ್ರತಿ ಗಿಡಕ್ಕೆ ನೀಡಬೇಕು.
- ಜಿಲ್ಲೆಯಾದ್ಯಂತ ಬಾಳೆ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತಿದ್ದು, ನಾಟಿಯ ಸಮಯದಲ್ಲಿ ಕಡ್ಡಾಯವಾಗಿ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರ ನಾಶಕವನ್ನು ಬಳಸಬೇಕು. ಇದರಿಂದ ಬಾಳೆಗೆ ಬರುವ ರೋಗಗಳನ್ನು ಹತೋಟಿಯಲ್ಲಿಡಬಹುದು.

**ಪಶು ವಿಜ್ಞಾನ**

ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರುಗಳು ಹೈನುರಾಸುಗಳ ಆರೋಗ್ಯ ಮತ್ತು ಗುಣ ಮಟ್ಟದ ಹಾಲು ಉತ್ಪಾದನೆಗೆ ಅವಶ್ಯಕವಿರುವ ದ್ವಿದಳ ಮೇವಿನ ಬೆಳೆಯಾದ ಕುದುರೆ ಮೆಂತೆಯನ್ನು ಅಕ್ಟೋಬರ್– ನವೆಂಬರ್ ತಿಂಗಳಲ್ಲಿ ಬಿತ್ತನೆ ಮಾಡಲು ಸೂಕ್ತ ಸಮಯವಾಗಿರುತ್ತದೆ. ಚಳಿಗಾಲ ಹತ್ತಿರವಾಗುತ್ತಿರುವುದರಿಂದ ಜಾನುವಾರುಗಳ ಉತ್ಪಾದನೆ ಕಡಿಮೆಯಾಗುವುದು ಸಹಜ. ಇದರ ಜೊತೆಗೆ ಜಾನುವಾರುಗಳಿಗೆ ಒಳ ಮತ್ತು ಹೊರ ಪರ ತಂತ್ರ ಜೀವಿಗಳ ಬಾಧೆ ಹೆಚ್ಚಾಗಿರುತ್ತದೆ. ಆದ್ದರಿಂದ ಜಂತು ನಿವಾರಕ ಔಷಧಿಗಳನ್ನು ಮುಂಜಾಗ್ರತ ಕ್ರಮವಾಗಿ ನೀಡಲು ಸೂಚನೆ.

**ಮೀನು ಕೃಷಿ :**

- ಮೀನು ಮರಿಗಳನ್ನು ಕೊಳಗಳಲ್ಲಿ ಸಾಕುತ್ತಿರುವ ರೈತರು ನಿಯಮಿತವಾಗಿ ದನದ ಸಗಣಿ/ಕೋಳಿ ಗೊಬ್ಬರವನ್ನು 10 ದಿನಗಳಿಗೊಮ್ಮೆ ನೀರಿಗೆ ಹಾಕಿ, ಫಲವತ್ತತೆ ಕಾಪಾಡಬೇಕು.
- ಭತ್ತದ ತೌಡು, ಮೆಕ್ಕೆ ಜೋಳದ ನುಚ್ಚು, ಹಿಂಡಿಗಳು, ಹಿಟ್ಟಿನ ಗಿರಣಿ ತ್ಯಾಜ್ಯಗಳು, ಮನೆ ತರಕಾರಿ ತ್ಯಾಜ್ಯಗಳು, ಅಝೋಲ್ಲಾ, ಎಳೆ ಹುಲ್ಲು, ಕುದುರೆ ಮೆಂತೆ ಹೀಗೆ ಹಲವಾರು ಮೇಲು ಆಹಾರದ ಪದಾರ್ಥಗಳನ್ನು ಮೀನುಗಳಿಗೆ ತಿನ್ನಲು ನೀಡಬಹುದು.

ತೆರೆದ–ಅಂಚೆ

ಗೆ,

ಪ್ರಧಾನ ಸಂಪಾದಕರು: ಡಾ. ದೇವರಾಜ ಟಿ.ಎನ್.

ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ.,

ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಶ್ರೀ ಹೆಚ್.ಎಂ. ಸಣ್ಣಗೌಡ್ರ

ಪ್ರಕಾಶಕರು : ಕಾರ್ಯಕ್ರಮ ಸಂಯೋಜಕರು, ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್,

ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ : 253341.